**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ**

ಸಿ.ಸಿ ನಂಬ್ರ: **607/2023** ಪಿಡಬ್ಲ್ಯೂ-**1**

ದಿನಾಂಕ: 14-02-2025 ರಂದು ಸಾಕ್ಷಿಯನ್ನು ಪುನಹ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಪಿ ಜೆ ಎಸ್ ರವರಿಂದ:

ನಾನು ಬೋಟಿನಲ್ಲಿ ಮೀನು ಹಿಡಿಯು ಕೆಲಸ ಮಾಡುತ್ತೇನೆ. ಆರೋಪಿ ನಮ್ಮ ಸಂಬಂಧಿಕನಲ್ಲ ಮತ್ತು ನಮ್ಮ ಜಾತಿಯವನು ಅಲ್ಲ. ಆರೋಪಿ ರೂ. 5 ಲಕ್ಷ ಕೇಳಿದ್ದು, ನಾನು ರೂ.2,00,000/- ಹಣ ಕೊಟ್ಟಿರುತ್ತೇನೆ. ಉಳಿದ ರೂ.3,00,000/- ಹಣವನ್ನು ರವಿ ಸೋಮಯಾಜಿ, ಹುದ್ರೋಳ್ಳಿ ರವರ ಬಳಿ ಕರೆದುಕೊಂಡು ಹೋಗಿ ಕೊಡಿಸಿರುತ್ತೇನೆ. ನನ್ನ ಪ್ರಕಾರ ಆರೋಪಿಯಿಂದ ನನಗೆ ರೂ.2,00,000/-ಹಣ ಮತ್ತು ರವಿ ಸೋಮಯಾಜಿರವರಿಗೆ ರೂ.3,00,000/- ಬರಬೇಕು ಎಂದರೆ ಸರಿ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ, ಆರೋಪಿಗೆ ಬಡ್ಡಿಗಾಗಿ ಹಣ ನೀಡಿಲ್ಲ. ಚೆಕ್ಕು ಅಮಾನ್ಯಗೊಂಡ ನಂತರ ವಕೀಲರನ್ನು ಸಂಪರ್ಕಿಸಿದಾಗ ಆರೋಪಿಯಿಂದ ನನಗೆ ರೂ.2,00,000/-ಹಣ ಮತ್ತು ರವಿ ಸೋಮಯಾಜಿರವರಿಗೆ ರೂ.3,00,000/- ಬರಬೇಕು ಎಂದು ವಕೀಲರಿಗೆ ಹೇಳಿರುತ್ತೇನೆ.

ನಾನು ನೀಡಿದ ರೂ.2,00,000/- ಹಣವನ್ನು ಸೊಸೈಟಿಯಿಂದ ಲೋನ್ ಪಡೆದಿದ್ದೆ. ಆ ಸಮಯದಲ್ಲಿ ನಾನು ಮನೆ ಕಟ್ಟುತ್ತಿದ್ದೆ. ಆ ಸಮಯದಲ್ಲಿ ಮನೆ ಕಟ್ಟುತ್ತಿದ್ದುದ್ದರಿಂದ ನನಗೂ ಕೂಡ ಹಣದ ಸಮಸ್ಯೆ ಇತ್ತು ಎಂದರೆ ಸರಿ. ಆರೋಪಿಗೆ ನಾನು ಹಣವನ್ನು ನಗದು ಮುಖಾಂತರ ಕೊಟ್ಟಿರುತ್ತೇನೆ. ರೂ.2,00,000/- ಹಣ ನನಗೆ ದೊಡ್ಡ ಮೊತ್ತ ಎಂದರೆ ಸರಿ. ಆರೋಪಿಗೆ ವಿಶ್ವಾಸದ ಮೇಲೆ ಹಣ ಕೊಟ್ಟಿದ್ದರಿಂದ, ಹಣ ಕೊಡುವಾಗ ಯಾವುದೇ ದಾಖಲೆ ಮಾಡಿಕೊಂಡಿಲ್ಲ. ಆರೋಪಿಗೆ ಸಾಲ ನೀಡುವಾಗ ದಾಖಲೆ ಮಾಡಿಕೊಳ್ಳಲು ತೊಂದರೆ ಇರಲಿಲ್ಲ. ನಾನು ಸೊಸೈಟಿಯಿಂದ ಲೋನ್ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲ.

ಆರೋಪಿಗೆ ಹಣ ಕೊಡುವಾಗ ಚೆಕ್ಕನ್ನು ಕೊಟ್ಟಿರಲಿಲ್ಲ. ನಾನು ಸಲ್ಲಿಸಿದ ಫಿರ್ಯಾದುವಿನಲ್ಲಿ ಆರೋಪಿಗೆ ಹಣ ಕೊಡುವಾಗ ಚೆಕ್ಕನ್ನು ನಮೂದಾಗಿದ್ದರೆ ಅದು ತಪ್ಪು ಎಂದರೆ ನನಗೆ ಗೊತ್ತಿಲ್ಲ. ನಾನು ಮನೆ ಕಟ್ಟುತ್ತಿದ್ದು, ಕಷ್ಟದಲ್ಲಿ ಇದ್ದುದ್ದರಿಂದ ಆರೋಪಿಗೆ ಸಾಲ ನೀಡುವ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಜೊತೆ ಆರೋಪಿ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ರವಿ ಸೋಮಯಾಜಿ ರವರು ತಮ್ಮ ಬಳಿ ಇದ್ದ ಆರೋಪಿಯ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ನನ್ನ ಮೂಲಕ ಈ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಓ.ದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ